## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ನೌಕರರ ವೇತನ ತಾರತಮ್ಯ ಕುರಿತಂತೆ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳ ಕುರಿತು.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: ಆಇ 6 ಎಸ್‌ಆರ್‌ಪಿ 2018 ದಿನಾಂಕ: 01.03.2018.
2. ಸರ್ಕಾರಿ ಆದೇಶ ಸಂಖ್ಯೆ:ಆಇ 24 ಎಸ್‌ಆರ್‌ಪಿ 2018(I) ರಿಂದ (XII) ದಿನಾಂಕ: 11.01.2019.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶಗಳಲ್ಲಿ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದಂತೆ, 6ನೇ ರಾಜ್ಯ ವೇತನ ಆಯೋಗದ ವರದಿಯ ಸಂಪುಟ 1 ಮತ್ತು ಸಂಪುಟ 2ರಲ್ಲಿನ ಕೆಲವು ನಿರ್ದಿಷ್ಟ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟದಲ್ಲಿ, ಕೆಳಗಿನ ವೃಂದದಲ್ಲಿ ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿ ಮುಂಬಡ್ತಿ/ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳನ್ನು ಪಡೆದ ಕಿರಿಯ ಸರ್ಕಾರಿ ನೌಕರನ ವೇತನದ ಸಮಕ್ಕೆ ಹಿರಿಯ ಸರ್ಕಾರಿ ನೌಕರನ ವೇತನವನ್ನು ಎತ್ತರಿಸಲು ಸೂಕ್ತ ಅವಕಾಶಗಳನ್ನು ಕಲ್ಪಿಸುವಂತೆ ಶಿಫಾರಸ್ಸು ಮಾಡಿರುತ್ತದೆ.

ಆದರೆ, ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿ (10 ವರ್ಷ/15 ವರ್ಷ) ಮುಂಬಡ್ತಿ ಮತ್ತು ಪದೋನ್ನತಿ ಸೌಲಭ್ಯಗಳನ್ನು ಪಡೆದ ಕಾರಣಕ್ಕಾಗಿ ಹೆಚ್ಚಿನ ವೇತನವನ್ನು ಪಡೆಯುತ್ತಿರುವ ಕಿರಿಯ ಸರ್ಕಾರಿ ನೌಕರನ ವೇತನದ ಸಮಕ್ಕೆ ಹಿರಿಯ ಸರ್ಕಾರಿ ನೌಕರನ ವೇತನವನ್ನು ಎತ್ತರಿಸಿ ನಿಗದಿಪಡಿಸಲು ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಸರ್ಕಾರಿ ಆದೇಶಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿರುವುದು ಗಮನಾರ್ಹ. ಸೇವಾವಧಿಯಲ್ಲಿ ಕನಿಷ್ಠ ಒಂದೂ ಪದೋನ್ನತಿಯನ್ನು ಪಡೆಯದೇ, ಒಂದೇ ವೃಂದದಲ್ಲಿ (ಹುದ್ದೆಯಲ್ಲಿ) 20 ವರ್ಷ, 25 ವರ್ಷ ಮತ್ತು 30 ವರ್ಷಗಳ ಸತತ ಸೇವೆಯನ್ನು ಪೂರ್ಣಗೊಳಿಸಿದ್ದಕ್ಕಾಗಿ ಮಂಜೂರು ಮಾಡಲಾಗುವ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯದಿಂದಾಗಿ ಉಂಟಾಗುವ ವೇತನ ಅಸಮಾನತೆಯನ್ನು ಸಹ ಸರಿಪಡಿಸಲು ಕೂಡ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

ಅದರಂತೆ, ಈ ಮೇಲೆ ತಿಳಿಸಲಾದಂತೆ ಚಾಲ್ತಿಯಲ್ಲಿರುವ ವೇತನ ಎತ್ತರಿಕೆ ಅವಕಾಶಗಳ ಬೆಳಕಿನಲ್ಲಿ, ಮುಂಬಡ್ತಿ ವೇತನ ಸೌಲಭ್ಯಗಳನ್ನು ಪಡೆದಿರುವ ಕಾರಣದಿಂದಾಗಿ ಹೆಚ್ಚಿನ ವೇತನವನ್ನು ಪಡೆಯುತ್ತಿರುವ ಕಿರಿಯ ಸರ್ಕಾರಿ ನೌಕರನ ಮತ್ತು ಹಿರಿಯ ಸರ್ಕಾರಿ ನೌಕರರ ವೇತನದಲ್ಲಿನ ತಾರತಮ್ಯವನ್ನು ಸರಿಪಡಿಸುವ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲಾಯಿತು. ಅದರಂತೆ, ಈ ಕೆಳಕಂಡ ಆದೇಶಗಳನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 24 ಎಸ್‌ಆರ್‌ಪಿ 2018(XIII)**
**ಬೆಂಗಳೂರು, ದಿನಾಂಕ: 28ನೇ ಮೇ 2019**

ಪ್ರಸ್ತಾವನೆಯಲ್ಲಿ ವಿವರಿಸಲಾದ ವಾಸ್ತವಾಂಶಗಳ ಬೆಳಕಿನಲ್ಲಿ, ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿ/ಹೆಚ್ಚುವರಿ ವೇತನ ಬಡ್ತಿಗಳ ಸೌಲಭ್ಯಗಳನ್ನು ಪಡೆದಿರುವ ಕಿರಿಯ ಸರ್ಕಾರಿ ನೌಕರನ ವೇತನದ ಸಮಕ್ಕೆ ಹಿರಿಯ ಸರ್ಕಾರಿ ನೌಕರನ ವೇತನವನ್ನು ಎತ್ತರಿಸುವ ಸಂಬಂಧ 6ನೇ ರಾಜ್ಯ ವೇತನ ಆಯೋಗವು ಮಾಡಿರುವ ಶಿಫಾರಸ್ಸುಗಳನ್ನು ಸರ್ಕಾರವು ಈ ಕೆಳಕಂಡ ಕಾರಣಗಳಿಂದ ತಿರಸ್ಕರಿಸುತ್ತದೆ:

1. ಒಂದು ನಿರ್ದಿಷ್ಟ ವೃಂದದ ಹುದ್ದೆಗೆ ವೇತನ ಮತ್ತು ವೇತನ ಶ್ರೇಣಿಯನ್ನು ನಿಗದಿಪಡಿಸುವ ವಿಷಯವು ಸಂಕೀರ್ಣವಾದದ್ದಾಗಿರುತ್ತದೆ ಮತ್ತು ವೇತನ ಆಯೋಗವು ವೃಂದಗಳಿಗೆ ಎದುರಾಗಿ ಈ ವಿಷಯದ ಬಗ್ಗೆ ಸಮಗ್ರವಾಗಿ ಗಮನಿಸಿರುವುದಿಲ್ಲ. ಆದುದರಿಂದ, ವಿವಿಧ ಸಂದರ್ಭಗಳಲ್ಲಿ ಸೇವಾ ನಿಬಂಧನೆಗಳು/ಷರತ್ತುಗಳ ಮೇಲೆ ಇದರ ಪರಿಣಾಮಗಳು ಊಹೆಗೆ ನಿಲುಕುವುದಿಲ್ಲ.
2. ಪ್ರಸ್ತಾವನೆಯಲ್ಲಿ ವಿವರಿಸಲಾದ ವಾಸ್ತವಾಂಶಗಳಲ್ಲದೇ, ತದನಂತರದಲ್ಲಿ ಕಿರಿಯ ಸರ್ಕಾರಿ ನೌಕರನಿಗೆ ಪದೋನ್ನತಿ ನೀಡುವುದೂ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ವೇತನ ಎತ್ತರಿಕೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಉಪಬಂಧಗಳನ್ನು ಆಯೋಗವು ಪರಿಶೀಲಿಸಿರುವುದಿಲ್ಲ.
3. ಒಂದೊಮ್ಮೆ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿದಲ್ಲಿ, ಇದು ಹಿರಿಯ ಮತ್ತು ಕಿರಿಯ ಸರ್ಕಾರಿ ನೌಕರನ ವೇತನದಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲದ ಸಂದರ್ಭಕ್ಕೆ ಎಡೆಮಾಡಿಕೊಡುತ್ತದೆ ಮತ್ತು ಇದು ಆಡಳಿತ ಯಂತ್ರದ ಶ್ರೇಣೀಕೃತ ವ್ಯವಸ್ಥೆಗೆ ತೀವ್ರ ಧಕ್ಕೆ ಉಂಟು ಮಾಡುತ್ತದೆ.
4. ವಾಸ್ತವಾಂಶಗಳ ವಿಶ್ಲೇಷಣೆಯ ಪರಿಮಿತಿಯ ವ್ಯಾಪ್ತಿಯು ಸಂಕುಚಿತವಾಗಿದ್ದು ಸಮಗ್ರತೆಯಿಂದ ಕೂಡಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜೆ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**
1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.

4. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
9. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
12. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.kar.nic.in** ವೀಕ್ಷಿಸಿ.